**ಓ.ಎಸ್. ನಂಃ 354/2019**

**ಡಿ. ಡಬ್ಲ್ಯೂಃ 1**

**ದಿನಾಂಕ 15.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಎಲ್.ವಿ.ಆರ್ ವಕೀಲರಿಂದಃ**

1. ದಾವಾ ಆಸ್ತಿಯ ಸರ್ವೇ ನಂಬರ್ 22/3 ಅಂತ ಇರುತ್ತದೆ. ದಾವಾ ಆಸ್ತಿಯು ಮೂಲತಃ ವಾದಿಯರ ಹಿರಿಯರಾದ ಹೆಗಡಿ ತಿಮ್ಮೇಗೌಡರಿಗೆ ಸೇರಿದ ಆಸ್ತಿಯೆಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯನ್ನು ನನ್ನ ತಂದೆ ಯಾದ ಸಣ್ಣೇಗೌಡರು ತಿಮ್ಮಮ್ಮ ರವರಿಂದ ಖರೀದಿಸಿರುತ್ತಾರೆಂದು ಸ್ವತಃ ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ನನ್ನ ತಂದೆಯವರು ತಿಮ್ಮಮ್ಮ ರವರಿಂದ ಖರೀದಿಸಿದ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯನ್ನು ನನ್ನ ತಂದೆಯವರು 1973 ರಲ್ಲಿ ಖರೀದಿ ಮಾಡಿರುತ್ತಾರೆ.

2. ಹೆಗಡಿ ತಿಮ್ಮೇಗೌಡರಿಗೆ ತಿಮ್ಮೇಗೌಡ, ಕರೀಗೌಡ, ಹುಚ್ಚೇಗೌಡ ಮತ್ತು ಸಣ್ಣೇಗೌಡ ಅಂಥ ನಾಲ್ಕು ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಹೆಗಡಿ ತಿಮ್ಮೇಗೌಡರ ಸದರಿ ನಾಲ್ಕು ಜನ ಮಕ್ಕಳು ಸಹ ಪಾಲು ವಿಭಜನೆ ಮಾಡಿಕೊಂಡು ಬೇರೆ ಬೇರೆಯಾಗಿರುತ್ತಾರೆ ಎಂದರೆ ಸರಿ. ಹೆಗಡಿ ತಿಮ್ಮೇಗೌಡರ ಮಕ್ಕಳ ಮದ್ಯೆ ಯಾವಾಗ ಪಾಲು ವಿಭಜನೆ ಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹೆಗಡಿ ತಿಮ್ಮೇಗೌಡರ ಮಕ್ಕಳ ಮದ್ಯೆ ಲಿಖಿತ ವಿಭಾಗ ಆಗಿರುವುದಿಲ್ಲ ಬದಲಾಗಿ ಮೌಖಿಕ ಪಾಲು ವಿಭಜನೆಯಾಗಿರುತ್ತದೆ ಎಂದರೆ ಸರಿ.

3. ಸರ್ವೆ ನಂಬರ್ 22/3 ರ ಒಟ್ಟು ವಿಸ್ತೀರ್ಣ 1 ಎಕರೆ 15 ಗುಂಟೆ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಸದರಿ 1 ಎಕರೆ 15 ಗುಂಟೆ ಜಮೀನಿನ ಪೈಕಿ 15 ಗುಂಟೆ ಜಮೀನನ್ನು ನನ್ನ ತಂದೆಯವರಾದ ಸಣ್ಣೇಗೌಡರವರು ಮಹದೇವ ನಾಯಕ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. 15 ಗುಂಟೆ

ಜಮೀನನ್ನು ನನ್ನ ತಂದೆಯವರಾದ ಸಣ್ಣೇಗೌಡರವರು ಮಹದೇವ ನಾಯಕ ಎನ್ನುವವರಿಗೆ ಮಾರಾಟ ಮಾಡಿದ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

4. ಹೆಗಡಿ ತಿಮ್ಮೇಗೌಡರ ಮೊದಲನೇಯ ಮಗನಾದ ತಿಮ್ಮೇಗೌಡರ ಹೆಂಡತಿಯ ಹೆಸರು ಸಣ್ಣಮ್ಮ ಎಂದರೆ ಸರಿ. ಸದರಿ ತಿಮ್ಮೇಗೌಡ ಮತ್ತು ಸಣ್ಣಮ್ಮ ರವರಿಗೆ ಒಬ್ಬಳೇ ಮಗಳು ಎಂದರೆ ಸರಿ. ಅವರ ಹೆಸರು 3 ನೇ ಪ್ರತಿವಾದಿಯಾದ ನಾಗಮ್ಮ ಎಂದರೆ ಸಾಕ್ಷಿಯು ಮೊದಲು 3 ನೇ ಪ್ರತಿವಾದಿಯ ಹೆಸರು ತಿಮ್ಮಮ್ಮ ಅಂತ ಇದ್ದು, ಅವರ ಮದುವೆ ಯಾದ ನಂತರ ನಾಗಮ್ಮ ಎಂದು ಅವರ ಹೆಸರು ಬದಲಾವಣೆ ಯಾಗಿರುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ. 3 ನೇ ಪ್ರತಿವಾದಿಯ ವಿವಾಹದ ಪೂರ್ವದಲ್ಲಿ ಅವರನ್ನು ತಿಮ್ಮಮ್ಮ ಎನ್ನುವ ಹೆಸರಿನಲ್ಲಿಯೇ ಕರೆಯುತ್ತಿದ್ದರು. 3 ನೇ ಪ್ರತಿವಾದಿಯ ವಿವಾಹದ ಪೂರ್ವದಲ್ಲಿ ಅವರನ್ನು ತಿಮ್ಮಮ್ಮ ಎನ್ನುವ ಹೆಸರಿನಿಂದ ಕರೆಯುತ್ತಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

5. 1 ನೇ ವಾದಿಯು ಹೆಗಡಿ ತಿಮ್ಮೇಗೌಡರ ಮಗನಾದ ಹುಚ್ಚೇಗೌಡರ ಹೆಂಡತಿ ಮತ್ತು 2 ನೇ ವಾದಿ ಸದರಿ ಹುಚ್ಚೇಗೌಡರ ಮಗ ಎಂದರೆ ಸರಿ. ನಾನು ಹೆಗಡಿ ತಿಮ್ಮೇಗೌಡರ ಮಗನಾದ ಸಣ್ಣೇಗೌಡರ ಮಗ ಮತ್ತು 1 ನೇ ಪ್ರತಿವಾದಿ ಸದರಿ ಸಣ್ಣೇಗೌಡರ ಹೆಂಡತಿ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. ಹೆಗಡಿ ತಿಮ್ಮೇಗೌಡ 4 ಜನ ಮಕ್ಕಳ ಮದ್ಯೆ ಆದ ಪಾಲು ವಿಭಜನೆಯ ದಾಖಲೆಗಳನ್ನು ನೀವು ನೋಡಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಆಗ ಚಿಕ್ಕವನಿದ್ದ ಕಾರಣ ನನಗೆ ಸದರಿ ಪಾಲು ವಿಭಜನೆಯ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

6. ದಾವಾ ಆಸ್ತಿಯ ಹಳೆಯ ಸರ್ವೆ ನಂಬರ್ 22/3 ಎಂದರೆ ಸರಿ. ದಾವಾ ಆಸ್ತಿಯ ಹೊಸ ಸರ್ವೇ ನಂಬರ್ 22/13 ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂಧಿ ಚೆಕ್ಕು ಬಂಧಿ ಪೂರ್ವಕ್ಕೆ – ದ್ಯಾವಯ್ಯ ರವರ ಜಮೀನು, ಪಶ್ಚಿಮಕ್ಕೆ – ಸರ್ವೇ ನಂಬರ್

23/1ರ ಜಮೀನು, ಉತ್ತರಕ್ಕೆ – ಮಹದೇವ ನಾಯಕ ರವರ ಜಮೀನು ಮತ್ತು ದಕ್ಷಿಣಕ್ಕೆ – ಸುಬ್ಬೇಗೌಡ ಮತ್ತು ಸಣ್ಣಮ್ಮ ರವರ ಜಮೀನು ಇದೆ ಎಂದರೆ ಸರಿ.

7. ಸರ್ವೇ ನಂಬರ್ 22/3ರಲ್ಲಿ ನನ್ನ ತಂದೆ 1 ಎಕರೆ 1 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ. ಸದರಿ ಆಸ್ತಿಯನ್ನು ನನ್ನ ತಂದೆ ಖರೀದಿಸಿದಾಗ ನಾನು ಚಿಕ್ಕವನಿದ್ದ ಕಾರಣ ಸದರಿ ಆಸ್ತಿಯನ್ನು ನನ್ನ ತಂದೆಯವರು ಎಷ್ಟು ಮೊತ್ತಕ್ಕೆ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ಸರ್ವೇ ನಂಬರ್ 22/3ರಲ್ಲಿ ಖರೀದಿಸಿದ 1 ಎಕರೆ 1 ಗುಂಟೆ ಜಮೀನಿನ ಕ್ರಯ ಪತ್ರದ ಅಡಿಯಲ್ಲಿ ಸದರಿ ಜಮೀನನ್ನು ಹೊರತು ಪಡಿಸಿ, ಬೇರೆ ಯಾವುದೇ ಜಮೀನನ್ನು ಖರೀದಿಸಿರುವುದಿಲ್ಲ.

8. ನಾನು ಅನಕ್ಷರಸ್ತನಾಗಿರುವುದರಿಂದ ನನ್ನ ಪರ ನ್ಯಾಯಾಲಯದಲ್ಲಿ ಯಾವೆಲ್ಲಾ ದಾಖಲೆಗಳು ಹಾಜರುಪಡಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಮ್ಮ ಪರ ಪ್ರತಿವಾದ ಪತ್ರವನ್ನು ಸಲ್ಲಿಸಲು ಯಾರು ಮಾಹಿತಿ ನೀಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಅನಕ್ಷರಸ್ತನಾಗಿರುವ ಕಾರಣ ನನಗೆ ಅವುಗಳ ಬಗ್ಗೆ ಏನೂ ಸಹ ಗೊತ್ತಿಲಾ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸಾವಾಲಿಗಾಗಿ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**